ದಿನಾಂಕಃ **06/08/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಹೆಚ್ ಆರ್ ಎಂ ವಕೀಲರಿಂದಃ

1. ವಾದಪತ್ರದಲ್ಲಿ ಬರೆದಿರುವುದೆಲ್ಲಾ ಗೊತ್ತಿದೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವುದೆಲ್ಲಾ ಗೊತ್ತಿಲ್ಲ.

2. ಪ್ರತಿವಾದಿಯರು ಮರವನ್ನು ಕಡಿದು ರಸ್ತೆ ಮಾಡಿರುತ್ತೇವೆ ಎಂದು ಹೇಳಿ ತೊಂದರೆ ನೀಡಿರುತ್ತಾರೆ. ಹಿಟ್ನೆ ಹೆಬ್ಬಾಗಿಲಿನ ಪಿ ಡಿ ಓ ನಮ್ಮ ಜಾಗವನ್ನು ಒತ್ತುವರಿ ಮಾಡಿ ಚರಂಡಿ ನಿರ್ಮಾಣ ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ದೂರನ್ನು ನೀಡಿರುತ್ತೇನೆ. ನಮ್ಮ ಜಾಗದಲ್ಲಿ 20 ಅಡಿ ಒತ್ತುವರಿ ಮಾಡಿರುತ್ತಾರೆ. ನನ್ನ ಆಸ್ತಿಯ ಕಂದಾಯವನ್ನು ಪಾವತಿಸಿರುತ್ತೇನೆ. ಕಂದಾಯ ಪಾವತಿಸಿರುವ ಬಗ್ಗೆ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ಮಹತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಹಿಟ್ನೆ ಹೆಬ್ಬಾಗಿಲಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ರಸ್ತೆಯ ಪಕ್ಕದ ಚರಂಡಿಯನ್ನು ನಿರ್ಮಿಸಲು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಯೋಜನೆಯ ಪ್ರಕಾರ ಜಿಲ್ಲಾ ಪಂಚಾಯಿತಿಯವರು ಚರಂಡಿ ಮಾಡುವಂತೆ ಗ್ರಾಮ ಪಂಚಾಯಿತಿಗೆ ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಾಗದಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

4. ನನ್ನ ಮನೆಯ ಬಾಗಿಲು ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇದೆ. ಉತ್ತರ ದಿಕ್ಕಿಗೆ ಇರುವ ಬಾಗಿಲಿನ ಮೂಲಕ ಮನೆಯ ಒಳಗಡೆ ಹೋಗಬೇಕಾದರೆ ಪಂಚಾಯಿತಿ ರಸ್ತೆಯ ಮೂಲಕವೇ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿಯು ಎರಡೂ ದಿಕ್ಕಿನಿಂದಲೂ ಕೂಡ

ಬರುತ್ತೇವೆ ಎಂದು ನುಡಿಯುತ್ತಾರೆ. ಪಂಚಾಯಿತಿ ರಸ್ತೆ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಇದೆ. ಉತ್ತರ ದಿಕ್ಕಿನಲ್ಲಿರುವ ಪಂಚಾಯಿತಿ ರಸ್ತೆಯ ಪಕ್ಕದಲ್ಲಿ ಗ್ರಾಮ ಪಂಚಾಯಿತಿ ಪಿ ಡಿ ಓ ಚರಂಡಿಯನ್ನು ನಿರ್ಮಿಸಲು ಹೋದಾಗ ನಾನು ಅವಾಚ್ಯ ಶಬ್ದದಿಂದ ಬೈದಿರುತ್ತೇನೆ ಎಂದರೆ ಸರಿ.

5. ನನ್ನ ಹೆಂಡತಿಗೆ ಮಂಜೂರಾಗಿರುವ ಜಾಗದ ಸ್ವತ್ತಿನ ಸಂಖ್ಯೆ ಗೊತ್ತಿಲ್ಲ. ಉತ್ತರ ದಿಕ್ಕಿನಲ್ಲಿರುವ ಪಂಚಾಯಿತಿ ರಸ್ತೆ 20 ಅಡಿ ಅಗಲವಿದೆ. ದಾವೆ ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಹಾಗೂ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರಕಾರದ ಆದೇಶದ ಪ್ರಕಾರ 1 ನೇ ಪ್ರತಿವಾದಿ ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಚರಂಡಿ ನಿರ್ಮಾಣ ಮಾಡಲು ಹೋಗಿರುತ್ತಾರೆ, ಅವರು ನನಗೆ ಯಾವುದೇ ತೊಂದರೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯಲ್ಲಿ ಎರಡು ಬ್ಯಾರನ್ ಮನೆ ಇದೆ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ವಾದಿ ಪರ ಶ್ರೀ. ಹೆಚ್ ಡಿ ಜಿ ವಕೀಲರಿಂದಃ</u>

1 ನೇ ಪ್ರತಿವಾದಿ ನನ್ನ ಜಾಗದಲ್ಲಿ ರಸ್ತೆಯನ್ನು ಮಾಡಿರುತ್ತಾರೆ.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಹೆಚ್ ಆರ್ ಎಂ ವಕೀಲರಿಂದಃ</u>

ಚರಂಡಿಯನ್ನು ಪಂಚಾಯಿತಿ ರಸ್ತೆಗೆ ಹೊಂದಕೊಂಡಂತೆ ನಿರ್ಮಿಸಿರುತ್ತಾರೆ ಹಾಗೂ ನನ್ನ ಜಾಗದಲ್ಲಿ ನಿರ್ಮಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1** ನೇ ಹೆಃಸಿ.ನ್ಯಾ. ಹಾಗೂ ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ.